**ದಿನಾಂಕ 09-01 -2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 4ನೇ ಪ್ರತಿವಾದಿಯರ ಪರ ಶ್ರೀ. ಡಿ..ಎಸ್ ವಕೀಲರಿಂದಃ**

1989 ರಲ್ಲಿ ನನಗೆ 15 ವರ್ಷ ವಯಸ್ಸು ಆಗಿತ್ತು . ನಾನು ಆಗ ಉಡುಪಿಯ ಇಂದಿರಾ ನಗರದಲ್ಲಿ ವಾಸವಾಗಿದ್ದೆ . ಆಗ ನಾನು ಎಸ್ ಎಸ್ ಎಲ್ ಸಿ ನಲ್ಲಿ ವ್ಯಾಸಂಗ ಮಾಡುತಿದ್ದೆ . ಶಾರದಾ ಬಾಯಿ ಆ ಸಮಯದಲ್ಲಿ ಪುತ್ತೂರಿನಲ್ಲಿ ವ್ಯಾಸಂಗ ಮಾಡುತಿದ್ದರು . ನನ್ನ ಹೆಚ್ಚುವರಿ ಮುಖ್ಯವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ 2 ರಲ್ಲಿ ಹೇಳಿರುವ ಸಂಗತಿಯಾದ ಶಾರಾದ ಬಾಯಿ ಬರೆದಿರುವ ವೀಲುನಾಮೆ ಅವರ ಕೊನೆಯ ವೀಲುನಾಮೆ ಎಂದರೆ ಸರಿಯಲ್ಲ . ಸದರಿ ವೀಲುನಾಮೆಯನ್ನು ನಾನು ನೋಡಿರುವ ನೆನಪಿಲ್ಲ . ಶಾರಾದ ಬಾಯಿ ರವರ ಸಹಿಯ ಪರಿಚಯ ಇರುವುದಿಲ್ಲ. ಶಾರಾದ ಬಾಯಿ ಸಹಿಯನ್ನು ನೋಡದೇ ಇರುವುದರಿಂದ ಮತ್ತು ಸದ್ರಿ ವೀಲುನಾಮೆಯನ್ನು ನೋಡದೇ ಇರುವುದರಿಂದ ಸದ್ರಿ ವೀಲುನಾಮೆ ಅಸಲಿ ವೀಲುನಾಮೆ ಅಲ್ಲ ಎಂದು ಹೇಗೆ ಹೇಳುತಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದ್ರಿ ಸ್ವತ್ತು ಶಾರಾದ ಬಾಯಿಯ ಸ್ವಂತ ಆಸ್ತಿಯಲ್ಲ ಆದ್ದರಿಂದ ಸದ್ರಿ ಆಸ್ತಿ ಅವರ ಗಂಡನ ಆಸ್ತಿಯಾಗಿರುವುದರಿಂದ ಶಾರಾದ ಬಾಯಿಗೆ ವೀಲುನಾಮೆ ಮಾಡಲು ಅಧಿಕಾರ ಇಲ್ಲ ಎಂದು ತಿಳಿಸಿರುತ್ತಾರೆ. ನನ್ನ ಪ್ರಕಾರ ವಿಟ್ಟಲ್ ಪೈ ಗೆ ಅವರ ಪೂರ್ವಿಕರಿಂದ ಪಾಲುಪಟ್ಟಿ ಮುಖೇನ ಬಂದಂತಹ ಆಸ್ತಿಯಾಗಿರುತ್ತದೆ . ನಾನು ಶಾರಾದ ಬಾಯಿ ಜೊತೆ ಮಾತನಾಡುತ್ತಿರುವಾಗ ಆಕೆ ಪಾಲು ಪಟ್ಟಿ ಮುಖೇನ ತನ್ನ ಯಜಮಾನರಿಗೆ ಸದ್ರಿ ಸ್ವತ್ತು ಬಂದಿದೆ ಎಂದು ಹೇಳಿರುತ್ತಾರೆ. ನನಗೆ 15-20 ವರ್ಷ ಇರುವಾಗ ಆ ರೀತಿ ಪಾಲುಪಟ್ಟಿ ಮುಖೇನ ಆಸ್ತಿ ತನ್ನ ಯಜಮಾನರಿಗೆ ಬಂದಿತು ಎಂದು ಹೇಳಿರುತ್ತಾರೆ . ಆ ಸಮಯದಲ್ಲಿ ಕುಟುಂಬದಎಲ್ಲಾ ವಿಚಾರವನ್ನು ಶಾರಾದ ಬಾಯಿ ಮಾತನಾಡುತ್ತಿದ್ದರು ಆಗ ಹೇಳಿರುತ್ತಾರೆ. ವೀಲುನಾವೆಯಲ್ಲಿ ಕಾಣಿಸಿದ ಸ್ವತ್ತು ಶಾರಾದ ಬಾಯಿಯ ಸ್ವಂತ ಆಸ್ತಿ ಎಂದರೆ ಸರಿಯಲ್ಲ . ಸದ್ರಿ ಸ್ವತ್ತು ಅವರ ಗಂಡನ ಆಸ್ತಿಯಲ್ಲ ಎಂದರೆ ಸರಿಯಲ್ಲ. ಶಾರಾದ ಬಾಯಿ ತನ್ನ ಗಂಡನ ಆಸ್ತಿ ಎಂದು ಬಾಯಿ ಮಾತಿನಲ್ಲಿ ಹೇಳಿದ್ದನ್ನು ಬಿಟ್ಟರೇ ಆಸ್ತಿಯ ಬಗ್ಗೆ ದಾಖಲೆ ನೋಡಿದೀರಾ

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಾಖಲೆ ನೋಡಿಲ್ಲ ಎಂದು ತಿಳಿಸಿರುತ್ತಾರೆ . ಶಾರಾದ ಬಾಯಿ ಗೆ 4 ಜನ ಮಕ್ಕಳು . ಶಾರಾದ ಬಾಯಿ ರವರ ಮಗ ರಾಘವೇಂದ್ರ ಸಣ್ಣ ಸಣ್ಣ ಕೆಲಸ ಮಾಡುತಿದ್ದ. ಶಾರಾದ ಬಾಯಿ ರವರ ಮಗಳು ವನಜಾ ಬಾಯಿ ಮದುವೆಯಾಗಲಿಲ್ಲ. ಶಾರಾದ ಬಾಯಿ ಇನ್ನೊಬ್ಬ ಮಗ ಮೋಹನ್ ಪೈ ತಾಯಿಯ ಜೊತೆ ವಾಸವಾಗಿದ್ದ. ವನಜಾ ಕೂಡ ತಾಯಿಯ ಜೊತೆಯಲ್ಲಿಯೇ ವಾಸವಾಗಿದ್ದರು . ರೋಹಿಣಿ ಅಲಿಯಾಸ್ ಲೀಲಾ ಮದುವೆಯಾಗಿ ಗಂಡನ ಜೊತೆ ಬಾಂಬೆಯಲ್ಲಿ ವಾಸವಾಗಿದ್ದರು. ರೋಹಿಣಿ ನಾನು 15 ವರ್ಷವಾಗಿದ್ದಾಗಲೇ ಮದುವೆಯಾಗಿದ್ದರು.

ಮೋಹನ್ ಪೈ ರವರು ತೀರಿಕೊಳುಳವಾಗ ದೈಹಿಕ ಮತ್ತು ಮಾನಸಿಕವಾಗಿ ಚೆನ್ನಾಗಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅವರು ಆಸ್ಪತ್ರೆ ದಾಖಲಾಗಿದ್ದರು ಎಂದು ತಿಳಿಸಿರುತ್ತಾರೆ . ಮೋಹನ್ ಪೈ ರವರು ಯಾವುದೇ ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ . ಯಾವ ವರ್ಷ ಮತ್ತು ಯಾವ ತಿಂಗಳು ಮೋಹನ್ ಪೈರವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ . 4 ನೇ ಪ್ರತಿವಾದಿ ಮುಕ್ತ ಪೈರವರಿಗೂ ಈ ದಾವೆಯಲ್ಲಿ ಸೇರಿರುವ ವಸಂತ ರವರಿಗೂ ಯಾವುದಾದರೂ ಸಂಬಂಧ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ತಿಳಿಸಿರುತ್ತಾರೆ .

**ಈ ಹಂತದಲ್ಲಿ ಉಳಿದ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿರುವುದರಿಂ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.